DAY — **20** SEAT NUMBER | | | | | | |

2025	III	08	1500	**J-429**	(K)

HISTORY (38)

Time : 3 Hrs. **(8 Pages)** **Max. Marks : 80**

ಸೂಚನೆಗಳು : *(1)* *ಎಲ್ಲ ಪ್ರಶ್ನೆಗಳನ್ನು ಬಿಡಿಸುವುದು ಕಡ್ಡಾಯವಾಗಿದೆ.*

(2) *ಬಲಬದಿಗೆ ಪ್ರಶ್ನೆಗಳ ಗುಣಗಳನ್ನು ಕೊಡಲಾಗಿದೆ.*

(3) *ಉತ್ತರ ಪತ್ರಿಕೆಯಲ್ಲಿ ಆಕೃತಿಯನ್ನು ಪೆನ್ನಿನಿಂದ ರಚಿಸಿರಿ.*

(4) *ಎಲ್ಲ ಹೊಸ ಪ್ರಶ್ನೆಗಳ ಉತ್ತರಗಳನ್ನು ಹೊಸ ಪುಟದಲ್ಲಿಯೇ ಬರೆಯಬೇಕು .*

ಪ್ರ.1. (ಅ) ಕೆಳಗೆ ಕೊಟ್ಟ ಪರ್ಯಾಯಗಳಲ್ಲಿ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ, ವಿಧಾನಗಳನ್ನು ಪುನ: ಬರೆಯಿರಿ : **[10]** **(6)**

(1) ಆಫ್ರಿಕಾ ಖಂಡವನ್ನು ಸುತ್ತು ಹಾಕಿದ ಪ್ರಥಮ ನಾವಿಕ ..... ಇವರು ಆಗಿದ್ದಾರೆ.

(ಅ) ಹೆನ್ರೀ. ದ. ನೆವ್ಹಿಗೇಟರ (ಬ) ಮಾರ್ಕೋ ಪೋಲೋ

(ಕ) ಬಾರ್ಥೋಲೊಮ್ಯು ಡಯಾಜ್ (ಡ) ಕೋಲಂಬಸ

(2) ಕ್ರಿ.ಶ. 1955 ರಲ್ಲಿ ಇಂಡೋನೇಷಿಯಾ ದೇಶದ ..... ಎಂಬಲ್ಲಿ ಏಷ್ಯಾ ಮತ್ತು ಆಫ್ರಿಕಾ ರಾಷ್ಟ್ರಗಳ ಸಭೆ ನಡೆಸಲಾಗಿತ್ತು.

(ಅ) ಬಾಂಡುಂಗ (ಬ) ಪ್ಯಾರಿಸ

(ಕ) ಕೋಲಂಬೊ (ಡ) ಮಾಲ್ದಿವ

(3) ಮಹರ್ಷಿ ವಿಠ್ಠಲ ರಾಮಜಿ ಶಿಂಧೆ ಇವರು ..... ಸಂಸ್ಥೆಯ ಸ್ಥಾಪನೆ ಮಾಡಿದರು.

(ಅ) ರಾಮಕೃಷ್ಣ ಮಿಶನ್ (ಬ) ಡಿಪ್ರೆಸ್ಡ್ ಕ್ಲಾಸಿಸ ಮಿಶನ

(ಕ) ಸತ್ಯ ಶೋಧಕ ಸಮಾಜ (ಡ) ಸೈಂಟಿಫಿಕ ಸೊಸೈಟಿ

(4) ಡಚ್ಚರು ತಮ್ಮ ಪ್ರಥಮ ವಸಾಹತವನ್ನು ..... ಎಂಬಲ್ಲಿ ಸ್ಥಾಪನೆ ಮಾಡಿದರು.

(ಅ) ಗೋವಾ (ಬ) ಸೂರತ

(ಕ) ಮಚ್ಚಲಿಪಟ್ಟಣ (ಡ) ಕಾಲಿಕತ

(5) ಮೊದಲನೆಯ ಜಾಗತಿಕ ಮಹಾ ಯುದ್ಧದ ನಂತರ ಜಗತ್ತಿನಲ್ಲಿ ಶಾಂತಿ ಸ್ಥಾಪಿಸಲು ..... ಸಂಘಟನೆಯನ್ನು ಸ್ಥಾಪಿಸಲಾಯಿತು.

(ಅ) ಯುನೇಸ್ಕೊ (UNESCO)

(ಬ) ಜಾಗತಿಕ ಆರೋಗ್ಯ ಸಂಸ್ಥೆ (WHO)

(ಕ) ಸುರಕ್ಷಾ ಸಮಿತಿ

(ಡ) ರಾಷ್ಟ್ರ ಸಂಘ

(6) ಮೊದಲನೇ ಬಾಜಿರಾವ ಪೇಶ್ವೆಯ ಬಂಧು ಚಿಮಾಜಿ ಅಪ್ಪಾ ಇವರು ವಸಾಯಿ ಎಂಬಲ್ಲಿ ..... ಸೋಲಿಸಿದನು.

(ಅ) ಬ್ರಿಟಿಷರನ್ನು (ಬ) ಪೋರ್ತುಗೀಜರನ್ನು

(ಕ) ಫ್ರೆಂಚರನ್ನು (ಡ) ಡಚ್ಚರನ್ನು

(ಬ) ಕೆಳಗಿನ ಪ್ರತಿಯೊಂದು ಜೋಡಿಗಳಲ್ಲಿನ 'ಬ' ಗುಂಪಿನಲ್ಲಿಯ ತಪ್ಪಾದ ಜೋಡಣೆಯನ್ನು ಸರಿಪಡಿಸಿ ಬರೆಯಿರಿ : **(4)**

(1)

'ಅ' ಗುಂಪು		'ಬ' ಗುಂಪು
(ಅ) ಕ್ರಿಸ್ಟೋಫರ ಕೋಲಂಬಸ	-	ಅಮೇರಿಕಾದ ಶೋಧ
(ಬ) ವಾಸ್ಕೋ-ಡಿ-ಗಾಮಾ	-	ಚೀನಾದ ಶೋಧ
(ಕ) ಮಂಗೋ ಪಾರ್ಕ	-	ಆಫ್ರಿಕಾದ ಶೋಧ
(ಡ) ಅಬೋಲ್ ಜಾನಸ್ಜಾಟಾಸಮನ	-	ನ್ಯೂಜಿಲ್ಯಾಂಡ ಶೋಧ

(2)

'ಅ' ಗುಂಪು		'ಬ' ಗುಂಪು
(ಅ) ಆರ್ಚ್‌ಬಿಷ್ಪ	-	ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ
(ಬ) ಶಾನ್ಸೆಲರ	-	ನ್ಯಾಯಾಧೀಶ
(ಕ) ವೆದೊರ.ದಿ.ಫಜೆಂದ್	-	ಆಸ್ತಿಯ ಮೇಲಿನ ಅಧಿಕಾರಿ
(ಡ) ಕಾಪಿತಾಂವ	-	ಕ್ಯಾಪ್ಟನ

(3)

'ಅ' ಗುಂಪು		'ಬ' ಗುಂಪು
(ಅ) ಸೂರ್ಯ ಸೇನ	-	ಬಂಗಾಲ
(ಬ) ವಿನಾಯಕ ದಾಮೋದರ ಸಾವರಕರ	-	ಗುಜರಾತ
(ಕ) ರಾಮಸಿಂಹ ಕುಕಾ	-	ಪಂಜಾಬ
(ಡ) ಶ್ಯಾಮಜಿ ಕೃಷ್ಣ ವರ್ಮಾ	-	ಲಂಡನ

(4)

'ಅ' ಗುಂಪು		'ಬ' ಗುಂಪು
(ಅ) ಬರ್ಮಾ ಇಂಡಿಪೆಂಡನ್ಸ್ ಆರ್ಮಿ	-	ಆ್ಯಂಗಸ್ಯಾನ (Aung San)
(ಬ) ಅಖಿಲ ಆಫ್ರಿಕಾ ಐಕ್ಯ ಪರಿಷತ	-	ಡಬ್ಲ್ಯೂ.ಇ.ಬಿ. ಡೂಬಾಯಿಸ್ (W.E.B. Du Bois)
(ಕ) ವಸಾಹತುಗಳಿಗೆ ಸ್ವಯಂ ನಿರ್ಣಯದ ಅಧಿಕಾರ	-	ವಿನ್ಸ್ಟನ್ ಚರ್ಚಿಲ್
(ಡ) ಭಾರತೀಯ ಸ್ವಾತಂತ್ರ್ಯ ಚಳುವಳಿ	-	ಮಹಾತ್ಮಾ ಗಾಂಧೀಜಿ

ಪ್ರ.2. (ಅ) ಐತಿಹಾಸಿಕ ವ್ಯಕ್ತಿ, ಸ್ಥಳ ಮತ್ತು ಘಟನೆಗೆ ಸಂಬಂಧಿಸಿದ ಹೆಸರು ಬರೆಯಿರಿ : **(4)** **[8]**

(1) ಇಂಗ್ಲೆಂಡದ ಈ ಮಹಾರಾಣಿಯ ಕಾಲದಲ್ಲಿ ಸಾಗರ ನೌಕಾಯಾನಕ್ಕೆ ಪ್ರೋತ್ಸಾಹ ದೊರೆಯಿತು —

(2) ಡಾ. ಬಾಬಾ ಆಢಾವ ಇವರು ಪ್ರಾರಂಭ ಮಾಡಿದ ಚಳುವಳಿ —

(3) ಜಪಾನ ದೇಶವು ಅಮೇರಿಕಾದ ಈ ನೌಕಾನೆಲೆಯ ಮೇಲೆ ದಾಳಿ ಮಾಡಿತು —

(4) ಯುರೋಪದಲ್ಲಿ ಅಮೇರಿಕಾದ ವಿರುದ್ಧವಾಗಿ ಸೋವಿಯತ ರಷ್ಯಾ ಮಾಡಿಕೊಂಡ ಒಪ್ಪಂದ —

(ಬ) ಕೆಳಗೆ ಕೊಟ್ಟ ಕಾರಣಗಳಲ್ಲಿ ಯೋಗ್ಯ ಕಾರಣವನ್ನು ಆಯ್ದುಕೊಂಡು ವಿಧಾನಗಳನ್ನು ಪೂರ್ಣಮಾಡಿ ಬರೆಯಿರಿ : **(4)**

(1) ಛತ್ರಪತಿ ಶಿವಾಜಿ ಮಹಾರಾಜರು ಉಪ್ಪಿನ ವ್ಯಾಪಾರದ ಮೇಲೆ ತೆರಿಗೆ ಹೇರಿದರು. ಕಾರಣ .....

(ಅ) ಪೋರ್ತುಗೀಸರಿಗೆ ವಿರೋಧ ಮಾಡಲು

(ಬ) ಬ್ರಿಟಿಷರ ಉಪ್ಪಿನ ವ್ಯಾಪಾರವನ್ನು ತೆಗೆದು ಹಾಕಲು

(ಕ) ಸ್ವರಾಜ್ಯದ ನಿರ್ಮಾಣಕ್ಕಾಗಿ ಹಣದ ಸಂಗ್ರಹ ಮಾಡುವುದಕ್ಕಾಗಿ

(ಡ) ವಸಾಹತುಗಳಿಗೆ ವಿರೋಧ ಮಾಡಲು

(2) ಗವರ್ನರ ಜನರಲ ಲಾರ್ಡ ಡಾಲಹೌಸಿಯ ಕಾಲದಲ್ಲಿ ಭಾರತೀಯ ಸಂಸ್ಥಾನಗಳಲ್ಲಿ ಅಸಂತೋಷದ ಭಾವನೆ ಹೆಚ್ಚಾಯಿತು. ಕಾರಣ .....

(ಅ) ಈತನು ಪ್ರಜೆಗಳ ಮೇಲೆ ಅನ್ಯಾಯಕಾರಿ ತೆರಿಗೆ ಹೇರಿದ್ದನು.

(ಬ) ಈತನು ಭಾರತೀಯ ವ್ಯಾಪಾರದ ಮೇಲೆ ನಿರ್ಬಂಧ ಹೇರಿದನು.

(ಕ) ಈತನು ಸಂಸ್ಥಾನಗಳಿಗೆ ''ದತ್ತು ಮಕ್ಕಳಿಗೆ ಹಕ್ಕು ಇಲ್ಲ'' ಎಂಬ ನೀತಿ ಹೇರಿದನು.

(ಡ) ಈತನು ಭಾರತೀಯ ಸೈನಿಕರ ವೇತನದಲ್ಲಿ ಕಡಿತಗೊಳಿಸಿದನು.

(3) ಯುರೋಪದಲ್ಲಿ ನ್ಯಾಟೋ (NATO) ಈ ಸಂಘಟನೆ ಸ್ಥಾಪನೆ ಮಾಡಲಾಯಿತು. ಕಾರಣ .....

(ಅ) ಸೋವಿಯತ ರಷ್ಯಾದ ವಿಸ್ತಾರವಾದ ನೀತಿಯ ವಿರುದ್ಧ ಯುರೋಪಿಯ ರಾಷ್ಟ್ರಗಳಿಗೆ ಸೈನಿಕ ಸಂರಕ್ಷಣೆ ಕೊಡಲು.

(ಬ) ಏಷ್ಯಾದಲ್ಲಿನ ಸಾಮ್ಯವಾದ ಪ್ರಸಾರವನ್ನು ತಡೆಯುವದಕ್ಕಾಗಿ.

(ಕ) ಪೆಸಿಫಿಕ ಮಹಾಸಾಗರದಲ್ಲಿ ತೆರಿಗೆ ಮುಕ್ತ ವ್ಯಾಪಾರ ಮಾಡುವ ಸಲುವಾಗಿ.

(ಡ) ಯುರೋಪದ ಅರ್ಥವ್ಯವಸ್ಥೆಯನ್ನು ಬಲಿಷ್ಠಗೊಳಿಸುವದಕ್ಕಾಗಿ.

(4) ಭಾರತ ಸರ್ಕಾರವು ಸಚಿನ ತೆಂಡೂಲ್ಕರ ಇವರಿಗೆ ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ''ಭಾರತರತ್ನ ''ವನ್ನು ಕೊಟ್ಟಿತು. ಕಾರಣ .....

(ಅ) ಭಾರತ ಸರ್ಕಾರವು ಇವರನ್ನು ಲೋಕಸಭೆಯ ಸದಸ್ಯರಾಗಿ ನಿಯುಕ್ತಿ ಮಾಡಿತು.

(ಬ) ಸಚಿನ ತೆಂಡೂಲ್ಕರರು ಕ್ರಿಕೆಟ ವ್ಯವಸಾಯಿಕರಣ ಮಾಡಿದರು.

(ಕ) ಭಾರತೀಯ ಜನರು ಸಚಿನ ತೆಂಡೂಲ್ಕರರಿಗೆ ''ಭಾರತರತ್ನ '' ಪ್ರಶಸ್ತಿ ಕೊಡಲು ಬೇಡಿಕೆ ಇಟ್ಟರು.

(ಡ) ಭಾರತ ಸರ್ಕಾರವು ಸಚಿನ ತೆಂಡೂಲ್ಕರರ ನೂರು ಶತಕಗಳ ಅಮೋಘ ಸಾಧನೆಯನ್ನು ಪರಿಗಣಿಸಿತು.

ಪ್ರ.3. (ಅ) ಕೆಳಗಿನ ನಕಾಶೆಯನ್ನು ನಿರೀಕ್ಷಣೆ ಮಾಡಿ, ಕೊಟ್ಟ ಪ್ರಶ್ನೆಗಳಿಗೆ ಉತ್ತರಿಸಿರಿ : (5) [13]



(1) ಭಾರತದ ಪೂರ್ವಕ್ಕೆ ಯಾವ ಮಹಾಸಾಗರವಿದೆ ?

(2) 1857ರ ಸ್ವಾತಂತ್ರ್ಯ ಹೋರಾಟದಲ್ಲಿ ಭಾರತದ ಪೂರ್ವದಿಕ್ಕಿನಲ್ಲಿನ ಒಂದು ಸ್ಥಳದ ಹೆಸರು ಬರೆಯಿರಿ.

(3) ಶ್ರೀಲಂಕಾ ದೇಶವು ಭಾರತದ ಯಾವ ದಿಕ್ಕಿಗೆ ಇದೆ ?

(4) 1857ರ ಸ್ವಾತಂತ್ರ್ಯ ಸಂಗ್ರಾಮ ಉಂಟಾದ ಸದ್ಯದ ಮಹಾರಾಷ್ಟ್ರದ ಯಾವುದಾದರೂ ಒಂದು ಸ್ಥಳವನ್ನು ಹೆಸರಿಸಿರಿ.

(5) ಅರಬ್ಬಿ ಸಮುದ್ರದಲ್ಲಿರುವ ಭಾರತದ ಒಂದು ದ್ವೀಪದ ಹೆಸರನ್ನು ಬರೆಯಿರಿ.

(ಬ) ಕೆಳಗೆ ಕೊಟ್ಟಿರುವ ಸಂಕಲ್ಪನೆಯ ಆಕೃತಿಗಳನ್ನು ಪೂರ್ಣ ಮಾಡಿರಿ (ಬೇಕಾದ ನಾಲ್ಕು) : **(8)**

(1)



(2)



(3)


ಇಂಡಿಯಾ ಹೌಸ
.....
ಸ್ವತಂತ್ರ ಸೈನಿಕರ ಪೀರ
.....
ಕ್ರಾಂತಿಕಾರಿಗಳು
ಮತ್ತು
ಅವರ ಸಂಘಟನೆಗಳು
ಲಾಲಾ ಹರದಯಾಳ್
.....
.....
ಅನುಶೀಲನ ಸಮಿತಿ

(4)


.....
ಸ್ವಾತಂತ್ರ್ಯಾ ನಂತರ ಭಾರತದಲ್ಲಿ
ವಿಲೀನಗೊಂಡ
ಸಂಸ್ಥಾನಗಳು ಮತ್ತು
ವಸಾಹತುಗಳು
.....
.....
.....

(5)


ಬ್ರಿಕ್ಸ್ (BRICS) ಸಂಘಟನೆಯ ಸದಸ್ಯರಾಷ್ಟ್ರಗಳು
.....
.....
ಬ್ರೆಝಿಲ್
.....
.....

(6)



ಪ್ರ.4. **(ಅ)** ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ : **(6)** **[15]**

(1) ಬೋಸ್ಟನ ಟೀ ಪಾರ್ಟಿ

(2) ಬ್ರಿಟಿಷ ಈಸ್ಟ ಇಂಡಿಯಾ ಕಂಪನಿ

(3) ಆರ್ಯ ಸಮಾಜ

(4) ಭಾರತದಲ್ಲಿ ನಿರ್ವಸಾಹತೀಕರಣ

(5) ತ್ವರಿತ ಅಂಚೆ (Speed post)

(ಬ) ಕೆಳಗಿನ ವಿಧಾನಗಳನ್ನು ಸಕಾರಣ ಸ್ಪಷ್ಟಪಡಿಸಿರಿ (ಬೇಕಾದ ಮೂರು) : **(9)**

(1) ಪ್ರಭೋಧನೆಯ ಪೂರ್ವದಲ್ಲಿ ಕ್ಯಾಥೋಲಿಕ ಚರ್ಚ ಜನರ ವೈಯಕ್ತಿಕ ಜೀವನದಲ್ಲಿ ನಿಯಂತ್ರಣ ಮಾಡುವ ಸಂಸ್ಥೆ ಆಗಿತ್ತು.

(2) ಬಡೋದಾ ಸಂಸ್ಥಾನದಲ್ಲಿ ಸಾಮಾಜಿಕ ಸುಧಾರಣೆಯಲ್ಲಿ ಮಹಾರಾಜಾ ಸಯಾಜಿರಾವ ಗಾಯಕವಾಡರ ಕೊಡುಗೆ ಮಹತ್ವದಾಗಿತ್ತು.

(3) ಜಾಗತಿಕ ಮಹಾಯುದ್ಧಗಳಿಂದ ಭಾರತದ ಮೇಲೆ ವಿಪರೀತ ಪರಿಣಾಮಗಳಾದವು.

(4) ಎರಡನೇ ಮಹಾಯುದ್ಧದ ನಂತರ ಆಫ್ರಿಕಾದಲ್ಲಿ ಸ್ವಾತಂತ್ರ್ಯ ಚಳುವಳಿಯು ಅಧಿಕವಾಗಿ ತೀವ್ರಗೊಂಡಿತು.

(5) ಶೀತಯುದ್ಧವು ಪ್ರಾರಂಭವಾಯಿತು.

ಪ್ರ.5. **ಕೆಳಗಿನ ಪ್ರಶ್ನೆಗಳಿಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ (ಬೇಕಾದ ಮೂರು) :** **[9]**

(1) ಯುರೋಪದ ವಸಾಹತುವಾದದಿಂದ ಭಾರತದ ಆರ್ಥಿಕ ಶೋಷಣೆಯಾಯಿತು.

(2) ಫ್ರೆಂಚರು ಮರಾಠರ ಸೈನ್ಯ ಸಾಮರ್ಥ್ಯ ಹೆಚ್ಚಿಸಲು ಸಹಾಯ ಮಾಡಿದರು.

(3) ಮಹಾತ್ಮಾ ಜೋತಿರಾವ ಫುಲೆ ಅವರು ಮಹಾರಾಷ್ಟ್ರದ ಆದ್ಯ ಸಮಾಜ ಸುಧಾರಕರಾಗಿದ್ದರು.

(4) ವಸಾಹತುವಾದ ಅಂತ್ಯಗೊಳಿಸಿದ ಶ್ರೇಯಸ್ಸು ಸಂಯುಕ್ತ ರಾಷ್ಟ್ರ ಸಂಘಕ್ಕೆ (UNO) ಸಲ್ಲುತ್ತದೆ.

(5) ಕೊಂಕಣದಲ್ಲಿ ಭಾವು ಕಾಟದರೆ ಇವರು ಮಾಡಿದ ಕಾರ್ಯವು ಮಹತ್ವಪೂರ್ಣವಾಗಿದೆ.

ಪ್ರ.6. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರವಾಗಿ ಉತ್ತರ ಬರೆಯಿರಿ (ಬೇಕಾದ ಎರಡು) : **[10]**

(1) ಆರ್ಥಿಕ ರಾಷ್ಟ್ರವಾದದ ಸ್ವರೂಪ ಮತ್ತು ಪರಿಣಾಮವನ್ನು ಸವಿಸ್ತಾರವಾಗಿ ಬರೆಯಿರಿ.

(2) ಉಮಾಜಿ ನಾಯಕನ ಬಂಡಾಯದ ಕುರಿತು ಮಾಹಿತಿ ಬರೆಯಿರಿ.

(3) ಭಾರತ ಸರ್ಕಾರದ ಆರೋಗ್ಯ ವಿಷಯಕ್ಕೆ ಸಂಬಂಧಿಸಿದ ಧೋರಣೆ ಸ್ಪಷ್ಟಪಡಿಸಿರಿ.

ಪ್ರ. 7. ಕೆಳಗಿನ ಪ್ರಶ್ನೆಗಳಿಗೆ ಕೊಟ್ಟ ಅಂಶಗಳ ಆಧಾರದ ಮೇಲಿಂದ ಸವಿಸ್ತಾರವಾಗಿ ಉತ್ತರ ಬರೆಯಿರಿ (ಬೇಕಾದ ಮೂರು) : **[15]**

(1) ಬ್ರಿಟಿಷರ ವಿಷ್ಯಾಖಂಡದಲ್ಲಿನ ವಸಾಹತವಾದ ಧೋರಣೆ ಬಗ್ಗೆ ಸ್ಪಷ್ಟಪಡಿಸಿರಿ.

(ಅ) ನೇಪಾಳ

(ಬ) ಸಿಕ್ಕಿಂ

(ಕ) ಭೂತಾನ

(2) ಬ್ರಿಟಿಷರು ಮತ್ತು ಮರಾಠರ ನಡುವಿನ ಸಂಘರ್ಷದ ಬಗ್ಗೆ ವಿವರಿಸಿರಿ.

(ಅ) ಆಂಗ್ಲೋ - ಮರಾಠಾ ಪ್ರಥಮ ಯುದ್ಧ

(ಬ) ಆಂಗ್ಲೋ - ಮರಾಠಾ ದ್ವಿತೀಯ ಯುದ್ಧ

(ಕ) ಆಂಗ್ಲೋ - ಮರಾಠಾ ತೃತೀಯ ಯುದ್ಧ

(3) ಎರಡನೇ ಜಾಗತಿಕ ಮಹಾಯುದ್ಧಕ್ಕೆ ಕಾರಣೀಭೂತವಾದ ಘಟಕದ ಬಗ್ಗೆ ವಿವರಿಸಿರಿ.

(ಅ) ವಾರ್ಸಾ ಒಪ್ಪಂದ

(ಬ) ಫ್ಯಾಸಿಜಂ (Fascism) ಮತ್ತು ನಾಝಿಸಂ (Nazism)

(ಕ) ರಾಷ್ಟ್ರ ಸಂಘದ ವೈಫಲ್ಯ

(4) ಅಲಿಪ್ತವಾದ ಚಳುವಳಿ ಬಗ್ಗೆ ಸ್ಪಷ್ಟಪಡಿಸಿರಿ.

(ಅ) ಅಲಿಪ್ತವಾದ ಚಳುವಳಿಯ ಸ್ವರೂಪ

(ಬ) ಅಲಿಪ್ತವಾದ ಚಳುವಳಿಯ ಮಾನದಂಡ (criteria)

(ಕ) ಬೆಲ್‌ಗ್ರೇಡ್ ಪರಿಷತ್ತು

(5) ಭಾರತ ಸರ್ಕಾರವು ಯುವಕರ ಸಲುವಾಗಿ ಕೈಗೊಂಡ ಧೋರಣೆಗಳ ಬಗ್ಗೆ ಸ್ಪಷ್ಟಪಡಿಸಿರಿ.

(ಅ) ರಾಷ್ಟ್ರೀಯ ಯುವ ಸಶಕ್ತಿಕರಣ ಕಾರ್ಯಕ್ರಮ

(ಬ) ರಾಷ್ಟ್ರೀಯ ಯುವಕರ ದಿನಾಚರಣೆ

(ಕ) ಯುವಕರ ತರಬೇತಿ ಯೋಜನೆಗಳು

◆◆◆